# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/103/12-13

ದಿನಾಂಕ :21-10-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಕು. ಎನ್ ಕೌಶಲ್ಯ ಮೈನರ್ ಗಾರ್ಡಿಯನ್ ಶ್ರೀ ಕೆ. ಶ್ರೀನಿವಾಸ ರೆಡ್ಡಿ ತಂದೆ ವಿರನಗೌಡ, ಕುರುವಳ್ಳಿ ಗ್ರಾಮ, ಆಲೂರು ಮಂಡಲ, ಆದೋನಿ ತಾಲ್ಲೂಕು, ಆಂಧ್ರಪ್ರದೇಶ<br><br>(ಶ್ರೀ ಆರ್. ಪಾಂಡು, ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಬಳ್ಳಾರಿ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಬಳ್ಳಾರಿ | 1108/2 | 0.01.37 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 521/03-04 ದಿನಾಂಕ 14/11/2003 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 20-11-2012, 12-11-2013, 14-11-2014, 20-11-2015, 01-04-2016, ಮತ್ತು 21-10-2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 21-10-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ಗ್ರಾಮದ ಸ.ನಂ 1108/2 ವಿಸ್ತೀರ್ಣ: 0.01.37 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 521/03-04 ದಿನಾಂಕ 14/11/2003 ನ್ನು ರದ್ದು ಪಡಿಸುವಂತೆ ಕೋರಿರುತ್ತಾರೆ, ಹಾಗೂ ಸದರಿ ಜಮೀನನ್ನು ಮೇಲ್ಮನವಿದಾರರು ನೊಂದಾಯಿತ ಕ್ರಯ ಪತ್ರ ಸಂಖ್ಯೆ 4672/2003-04 ದಿನಾಂಕ 11-08-2003 ರಂದು ಜಿ.ವೆಂಕಟೇಶಲು, ಜಿ.ನಾಗರಾಜ ಇವರುಗಳ ಜಿ.ಪಿ.ಎ.ಹೋಲ್ಡರ್ ಹೆಚ್.ಎಸ್ ರೆಡ್ಡಿ ತಂದೆ ಮಾರೆಣ್ಣ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ.ಸದರಿ ಕ್ರಯ ಪತ್ರದನ್ವಯ ಹಕ್ಕುದಾಖಲಿಸಲು ಕೋರಿರುತ್ತಾರೆ.

ಮುಂದುವರೆದು ಪ್ರಕರಣದಲ್ಲಿನ ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ ಜಮೀನಿನ ಹಕ್ಕುಬದಲಾವಣೆಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಸಕಾರಣವಾಗಿಯೆ ಗೈರಯ ಮಂಜೂರು ಮಾಡಿದ್ದು, ಪ್ರಶ್ನಿತ ಹಕ್ಕು ಬದಲಾವಣೆಗೆ ನೋಡಲಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 95 ರ ಉಲ್ಲಂಘನೆ ಕಂಡುಬಂದಿರುತ್ತದೆ, ಕಾರಣ ಸದರಿ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.